ಡಾ. ಕೆ. ಮುರಳೀಧರ
ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ದೂರವಾಣಿ : ಕಛೇರಿ : 22286773
22033239
ಕೊಠಡಿ ಸಂಖ್ಯೆ: 263, ಎರಡನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001

ಸಂಖ್ಯೆ:ಕಅಪ್ರಾ/ಕಾ೧/೨೯/೨೦೧೬-೧೭

ದಿನಾಂಕ ೨೪/೦೨/೨೦೧೭



## ಜ್ಞಾಪನಾ

**ವಿಷಯ:** ಡಾ. ಎ. ಗ್ರೆಗೊರಿ ಅಶೋಕ್, ಬೆಂಗಳೂರು ಇವರನ್ನು ಪ್ರಾಧಿಕಾರದ ಕಾರ್ಯಕ್ರಮಗಳಿಗೆ ಸಮನ್ವಯಕಾರರನ್ನಾಗಿ ನೇಮಿಸುವ ಬಗ್ಗೆ.

**ಉಲ್ಲೇಖ:** ೧. ಡಾ.ಎಲ್. ಹನುಮಂತಯ್ಯ, ಅಧ್ಯಕ್ಷರು, ಕಅಪ್ರಾ ಇವರ ಆದೇಶ ಸಂಖ್ಯೆ: ಕಅಪ್ರಾ/೨೦೪/೨೦೧೬/೧೭, ದಿ:೨೦/೦೮/೨೦೧೬

೨. ದಿನಾಂಕ ೨೨/೦೮/೨೦೧೬ ಮತ್ತು ೧೮/೧೧/೨೦೧೬ ರಂದು ನಡೆದ ಪ್ರಾಧಿಕಾರದ ಸರ್ವ ಸದಸ್ಯರ ಸಭೆಯ ನಡವಳಿಗಳು

*** **** ***

**ಪ್ರಸ್ತಾವನೆ:**

ಉಲ್ಲೇಖ (೧) ರನುಸಾರ ಡಾ. ಎ. ಗ್ರೆಗೊರಿ ಅಶೋಕ್, ಬೆಂಗಳೂರು ಇವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಗಳ ಆಯೋಜನೆಗೆ ಸಮನ್ವಯಕಾರರನ್ನಾಗಿ ನೇಮಿಸಲು ಸೂಚಿಸಲಾಗಿದ್ದು, ಈ ಕುರಿತಂತೆ ದಿನಾಂಕ ೨೨/೦೮/೨೦೧೬ ರಂದು ನಡೆದ ಪ್ರಾಧಿಕಾರದ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲಾಗಿದೆ. ಸಭಾ ನಡವಳಿಯ ಕಂಡಿಕೆ (೪೧)ರನುಸಾರ, ಈ ಪ್ರಸ್ತಾವನೆಯನ್ನು ಸಭೆಯು ಪರಾಂಬರಿಸಿ ಪ್ರಾಧಿಕಾರದ ವತಿಯಿಂದ ಅಲ್ಪಸಂಖ್ಯಾತ ಸಮುದಾಯಗಳಿಗೆ ನಡೆಸುವ ಕನ್ನಡಪರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಮನ್ವಯಕಾರರನ್ನಾಗಿ ಪರಿಗಣಿಸಲು ನಿರ್ಣಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ:**

**ಡಾ. ಎ. ಗ್ರೆಗೊರಿ ಅಶೋಕ್, ಬೆಂಗಳೂರು ಇವರನ್ನು ಪ್ರಾಧಿಕಾರದ ವತಿಯಿಂದ ಅಲ್ಪ ಸಂಖ್ಯಾತ ಸಮುದಾಯಗಳಿಗೆ ನಡೆಸುವ ಕನ್ನಡ ಪರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕೆಳಕಂಡ ಷರತ್ತುಗಳಿಗೊಳಪಟ್ಟು ಸಮನ್ವಯಕಾರರನ್ನಾಗಿ ದಿನಾಂಕ ೨೨/೦೮/೨೦೧೭ ರವರೆಗೆ ನೇಮಿಸಲಾಗಿದೆ.**

೧. ಡಾ. ಎ. ಗ್ರೆಗೊರಿ ಅಶೋಕ್, ರವರು ಪ್ರಾಧಿಕಾರದ ಪರವಾಗಿ ಆದೇಶಿಸುವ ಕಾರ್ಯಕ್ರಮಗಳಿಗೆ ಪ್ರಾಧಿಕಾರ ವಿಧಿಸುವ ಯಾವುದೇ ಉಚಿತ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
೨. ಕಾರ್ಯಕ್ರಮ ನಿರ್ವಹಣೆ ಸಂದರ್ಭದಲ್ಲಿ ಆಯೋಜಕರು ಕರ್ತವ್ಯ ಲೋಪ ಎಸಗಿದಲ್ಲಿ ಮುಂದಿನ ದಿನಗಳಲ್ಲಿ ಆದೇಶ ರದ್ದು ಪಡಿಸುವ ವಿವೇಚನೆ ಪ್ರಾಧಿಕಾರದ್ದಾಗಿರುತ್ತದೆ.
೩. ಪ್ರತಿ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಸದರಿಯವರು ಪ್ರಾಧಿಕಾರದ ವತಿಯಿಂದ ಉಚಿತ ಅನುಮತಿ ಪಡೆಯತಕ್ಕದ್ದು.
೪. ಯಾವುದೇ ಕಾರ್ಯಕ್ರಮ ನಿರ್ವಹಣೆ ಪೂರ್ವದಲ್ಲಿ ಸಮನ್ವಯಕಾರರನ್ನು ಆಯ್ಕೆ ಮಾಡುವ ವಿಚಾರ ಪ್ರಾಧಿಕಾರದ ವಿವೇಚನೆಗೊಳಪಟ್ಟಿರುತ್ತದೆ.

ನೊಂದಾಯಿತ ಅಂಚೆ ಮೂಲಕ ರವಾನಿಸಿದೆ
ಸಂಖ್ಯೆ 886 ದಿನಾಂಕ 25/2/17

ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ

**ಪ್ರತಿಯನ್ನು:**
೧. ಡಾ. ಎ. ಗ್ರೆಗೊರಿ ಅಶೋಕ್, ನಂ. ೧೪/ಬಿ, ತಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು –೦೫
೨. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರವರಿಗೆ ಗೌರವಪೂರ್ವಕ ಮಾಹಿತಿಗೆ
೩. ಕಛೇರಿ ಪ್ರತಿ.